3) ದೇವಾಲಯದ ಮಟ್ಟಿಲುಗಳಿಗೆ ತಡೆಗೋಡೆ ನಿರ್ಮಾಣ

4) ಕೆಂಪೇಗೌಡ ಹಜಾರೆಯಿಂದ ಬಸವಣ್ಣ ಇರುವ ಸ್ಥಳಕ್ಕೆ ಮೆಟ್ಟಿಲುಗಳ ದುರಸ್ಥಿ.

2002-03ನೇ ಸಾಲಿನಲ್ಲಿ ಶಾಸಕರ ಕ್ಷೇತ್ರಾಭಿವೃದ್ಧಿಗೆ ಬಿಡುಗಡೆಯಾದ ಹಣ

298 (2574) ಶ್ರೀ ಸೋಮಣ್ಣ ವಿ. (ಬಿನ್ನಿಪೇಟೆ): ಮಾನ್ಯ ಯೋಜನಾ, ಸಾಂಖ್ಯಿಕ ಮತ್ತು ಸಾಂಸ್ಥಿಕ ಹಣಕಾಸು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 2002-2003ನೇ ಸಾಲಿನಲ್ಲಿ ಎಲ್ಲಾ ಶಾಸಕರುಗಳಿಗೆ ಶಾಸಕರ ಕ್ಷೇತ್ರಾಭಿವೃದ್ಧಿ ನಿಧಿಗೆ ಸರ್ಕಾರ ಮೀಸಲಾಗಿಟ್ಟಿರುವ ಹಣವೆಷ್ಟು;

ಆ) ಇಲ್ಲಿಯವರೆಗೆ ಪ್ರತಿಯೊಬ್ಬ ಶಾಸಕರಿಗೆ ಈ ನಿಧಿಯಿಂದ ಬಿಡುಗಡೆ ಮಾಡಿರುವ ಹಣವೆಷ್ಟು;

ಇ) ಉಳಿದ ಹಣವನ್ನು ಯಾವಾಗ ಬಿಡುಗಡೆ ಮಾಡಲಾಗುವುದು?

ಶ್ರೀ ಆರ್.ಬಿ. ತಿಮ್ಮಾಪುರ್ (ಯೋಜನಾ, ಸಾಂಖ್ಯಿಕ ಮತ್ತು ಸಾಂಸ್ಥಿಕ ಹಣಕಾಸು ಸಚಿವರು):

ಅ) ರೂ. 31.60 ಕೋಟಿ.

ಆ) ಪ್ರತಿಯೊಬ್ಬ ಶಾಸಕರಿಗೆ ತಲಾ ರೂ. 10.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಇ) ಉದ್ಭವಿಸುವುದಿಲ್ಲ

ಕಲಘಟಗಿ ಕ್ಷೇತ್ರದಲ್ಲಿ ಆಶ್ರಯ ಮನೆಗೆ ಜಾಗ ನೀಡುವ ಬಗ್ಗೆ

299 (2375) ಶ್ರೀ ಚಿಕ್ಕನಗೌಡರ ಸಿದ್ದನಗೌಡ ಈಶ್ವರಗೌಡ (ಕಲ್ಗಘಗಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹುಬ್ಬಳ್ಳಿ ತಾಲ್ಲೂಕು, ಗ್ರಾಮಾಂತರ ಕಲಘಟಗಿ ಕ್ಷೇತ್ರ ವ್ಯಾಪ್ತಿಯಲ್ಲಿ ಅದರಗುಂಚ ಹಾಗೂ ಕಟ್ಟೂರು ಪಂಚಾಯಿತಿ ನಡುವಿನ ಬುಡರಸಿಂಗಿ ಗುಡ್ಡ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಬಂದಿದ್ದಲ್ಲಿ, ಈ ಗುಡ್ಡದ ಸುತ್ತಮುತ್ತಲ ಪ್ರದೇಶದಲ್ಲಿ ಇರುವ ಜಮೀನಿನ ವಿಸ್ತೀರ್ಣ ಎಷ್ಟು; ಈ ಎರಡು ಪಂಚಾಯಿತಿಗಳ ವ್ಯಾಪ್ತಿಗೆ ಎಷ್ಟೆಷ್ಟು ಎಕರೆ ಇದೆ; ವಿವರಿಸಿ;

ಇ) ಈ ಪೈಕಿ ಎಷ್ಟೆಷ್ಟು ಜಾಗವನ್ನು ಯಾವ ಯಾವ ಉದ್ದೇಶಗಳಿಗಾಗಿ ಸರ್ಕಾರ ನೀಡಿದೆ; ಜಮೀನಿನ ಹಸ್ತಾಂತರವನ್ನು ಯಾವಾಗ ಮಾಡಲಾಯಿತು;

ಈ) ಸದರಿ ಜಮೀನನ್ನು ಆಶ್ರಯ ಯೋಜನೆಯ ಮನೆ ನಿರ್ಮಾಣಕ್ಕಾಗಿ ಬಳಸಿಕೊಳ್ಳಲು ಸರ್ಕಾರ ಆಲೋಚಿಸಿದೆಯೇ ಹೇಗೆ;

ಉ) ಈ ಉದ್ದೇಶಕ್ಕಾಗಿ ಅದರಗುಂಚ ಪಂಚಾಯತಿಯು ಆಶ್ರಯ ಮನೆಗೆ ಜಾಗಕ್ಕಾಗಿ ಪ್ರಸ್ತಾವನೆಯನ್ನು ಮುಂದಿಟ್ಟಿದೆಯೇ; ಎಷ್ಟು ಎಕರೆ ಪ್ರದೇಶ ವ್ಯಾಪ್ತಿಯನ್ನು ಇದಕ್ಕಾಗಿ ಈ ಪಂಚಾಯಿತಿಯವರು ಕೋರಿದ್ದಾರೆ ಯಾವಾಗ ಕೋರಿದ್ದರು; ಕೋರಿದ್ದರೆ ಜಮೀನು ನೀಡುವಲ್ಲಿ ವಿಳಂಬವಾಗಲು ಕಾರಣವೇನು;

ಊ) ಇದಕ್ಕಾಗಿ ಜಾಗವನ್ನು ನೀಡುವ ವಿಚಾರ ಸರ್ಕಾರಕ್ಕಿದೆಯೇ, ಯಾವಾಗ ನೀಡಲಾಗುತ್ತದೆ; ವಿವರಿಸಿ?